ಮಳೆಗಾಲವಲ್ಲದ ಸಮಯದಲ್ಲಿ ಸಮುದ್ರಕ್ಕೆ ಬಿಡಲು ಅನುಮತಿಸಲಾಗಿದೆ. ಮಳೆಗಾಲದಲ್ಲಿ ಮಂಡಳಿ ನಿಗಧಿಪಡಿಸಿರುವ ಮಾನಕಕ್ಕೆ ಸರಿಹೊಂದುವ ಮಳೆ ನೀರನ್ನು ಒಳಗೊಂಡು 342 ಘನ ಮೀ.ನಷ್ಟು ಶುದ್ಧೀಕರಿಸಿದ ಕಲುಷಿತ ನೀರನ್ನು ಸಮುದ್ರಕ್ಕೆ ವಿಸರ್ಜಿಸಲು ಅನುಮತಿಸಲಾಗಿದೆ. ಈ ಮರು ಬಳಕೆ ವ್ಯವಸ್ಥೆಯು ಇನ್ನೂ ಪ್ರಾರಂಭದ ಹಂತದಲ್ಲಿರುವ ಕಾರಣ ಹಾಗೂ ಕೆಲವು ತಾಂತ್ರಿಕ ತೊಂದರೆಗಳಿಂದಾಗಿ ಉದ್ದಿಮೆಯ ಸುಮಾರು ಘಂಟೆಗೆ 30ರಿಂದ 40 ಘನ ಮೀ.ನಷ್ಟು ಶುದ್ಧೀಕರಿಸಿದ ಕಲುಷಿತ ನೀರನ್ನು ಈಗ ಸಮುದ್ರಕ್ಕೆ ವಿಸರ್ಜಿಸಲಾಗುತ್ತಿದೆ.

ಸಮುದ್ರದ ನೀರಿನ ಹಾಗೂ ಇತರ ಜಲಚರಗಳ ಮೇಲಿನ ಪ್ರತಿಕೂಲದ ಅಧ್ಯಯನವನ್ನು ಉದ್ದಿಮೆಯು ಸಿಎಂಎಫ್ಆರ್ಐ ವತಿಯಿಂದ ನಡೆಸುತ್ತಿದೆ. ಈ ವರದಿಯನ್ವಯ ಈವರೆವಿಗೂ, ಉದ್ದಿಮೆಯು ಕಲುಷಿತ ನೀರನ್ನು ವಿಸರ್ಜಿಸುವ ಪ್ರದೇಶ ಹಾಗೂ ಸುತ್ತಮುತ್ತ ಯಾವ ಪ್ರತಿಕೂಲ ಆಘಾತ ಕಂಡು ಬಂದಿರುವುದಿಲ್ಲ.

ಬಿ.ಎ.ಎಸ್.ಎಫ್:

ಈ ಉದ್ದಿಮೆಯಿಂದ ದಿನಂಪ್ರತಿ 500 ಘನ ಮೀ. ಪ್ರಮಾಣದಲ್ಲಿ ಕಲುಷಿತ ನೀರು ಹೊರ ಬರುತ್ತಿದೆ. ಇದನ್ನು ಶುದ್ಧೀಕರಿಸಲು ಸಂಸ್ಕರಣ ಘಟಕಗಳನ್ನು ಉದ್ದಿಮೆಯು ಅಳವಡಿಸಿದೆ. ಶುದ್ಧೀಕರಿಸಿದ ಕಲುಷಿತ ನೀರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಗಧಿಪಡಿಸಿರುವ ಮಾನಕಕ್ಕೆ ಸರಿಹೊಂದುತ್ತಿರುತ್ತದೆ. ಮತ್ತು ಇದನ್ನು ಸಮುದ್ರ ತೀರದಿಂದ ಸುಮಾರು 1600 ಮೀ.ದೂರದಲ್ಲಿ ವಿಸರ್ಜಿಸಲಾಗುತ್ತಿದೆ. ಇದನ್ನು ಎನ್ಬಿಒ ಸಂಸ್ಥೆಯು ನಿಗಧಿಪಡಿಸಿರುವುದು.

ಉದ್ದಿಮೆಯು ಮೀನುಗಾರಿಕಾ ಕಾಲೇಜು ವತಿಯಿಂದ ಸಮುದ್ರದ ನೀರಿನ ಮತ್ತು ಜಲಚರ ಮಾನಕಗಳ ಮಾಪನ ಮಾಡುತ್ತಿದ್ದು ಈವರೆವಿಗೂ ಯಾವ ಪ್ರತಿಕೂಲ ಆಘಾತ ವರದಿಯಾಗಿರುವುದಿಲ್ಲ.

ಮಂಗಳೂರು ನಗರದಲ್ಲಿ ಶಾಲಾ ಕಟ್ಟಡಗಳ ದುರಸ್ಥಿ

91 (216)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ನಗರದ ಬಲ್ಮಠ ಮಹಿಳಾ ಕಾಲೇಜು, (2) ಬೊಕ್ಕಪಟ್ಟ, ಪಿಯುಸಿ ಕಾಲೇಜು (3) ರಥಬೀದಿ ಮಹಿಳಾ ಕಾಲೇಜುಗಳಲ್ಲಿ ಎಷ್ಟು ಹಾಗೂ ಯಾವ ಯಾವ ಅಧ್ಯಾಪಕರುಗಳ ಸಿಬ್ಬಂದಿಗಳ ಕೊರತೆಗಳಿವೆ? ಹಾಗೂ ಅವುಗಳನ್ನು ಯಾವಾಗ

ನೇಮಕಾತಿ ಮಾಡಲಾಗುವುದು?

ಆ) ಈ ಮೇಲಿನ ಕಾಲೇಜುಗಳಲ್ಲಿ ಪೀಠೋಪಕರಣಗಳ ಶೌಚಾಲಯ, ಕಟ್ಟಡಗಳ ದುರಸ್ತಿ, ಆವರಣಗೋಡೆಗಳ ದುರಸ್ತಿ ಹಾಗೂ ಕಂಪ್ಯೂಟರ್‌ಗಳನ್ನು ಕೊಡುವಂತೆ ಕ್ರಮ ಕೈಗೊಳ್ಳಲಾಗುವುದೇ? ಹಾಗಿದ್ದಲ್ಲಿ ಎಷ್ಟು ಸಮಯದ ಒಳಗೆ ಕ್ರಮಕೈಗೊಳ್ಳಲಾಗುವುದು.

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಕಾಲೇಜುವಾರು ಖಾಲಿಯಿರುವ ಉಪನ್ಯಾಸಕರ ಹುದ್ದೆಗಳು ಕೆಳಕಂಡಂತಿವೆ.

ಕಾಲೇಜು	ಹುದ್ದೆಗಳ ಸಂಖ್ಯೆ	ವಿಷಯ
1. ಸ.ಪ.ಪೂ.ಕಾ. ಬಲ್ಮಠ ಮಂಗಳೂರು.	02	ಇತಿಹಾಸ ಮತ್ತು ಹಿಂದಿ.
2. ಸ.ಪ.ಪೂ.ಕಾ. (ಬಾಲಕಿಯರ) ರಥಬೀದಿ ಮಂಗಳೂರು.	02	ಕನ್ನಡ ಮತ್ತು ಹಿಂದಿ
3. ಸ.ಪ.ಪೂ.ಕಾ. ಬೊಕ್ಕಪಟ್ಟಣ	03	ಕನ್ನಡ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ

ವರ್ಷದ ಮಧ್ಯದಲ್ಲಿ ಉಪನ್ಯಾಸಕರುಗಳನ್ನು ವರ್ಗಾವಣೆ ಮಾಡಿ ತುಂಬಲು ಅವಕಾಶವಿಲ್ಲದೆ ಇರುವುದರಿಂದ, ವರ್ಗಾವಣೆ ಮೂಲಕ ಖಾಲಿ ಹುದ್ದೆಗಳನ್ನು ತುಂಬಲು ಸಾಧ್ಯವಾಗಿರುವುದಿಲ್ಲ. ಆದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ, ಸಮೀಪದ ಸರ್ಕಾರಿ ಪದವಿಪೂರ್ವ ಕಾಲೇಜುಗಳಿಂದ ಲಭ್ಯವಿರುವ ಉಪನ್ಯಾಸಕರುಗಳನ್ನು ವಾರದಲ್ಲಿ 3 ದಿನ ನಿಯೋಜನೆ ಮಾಡುವ ಮೂಲಕ ಪಾಠ-ಪ್ರವಚನಗಳು ಪೂರ್ಣವಾಗುವಂತೆ ನೋಡಿಕೊಂಡಿದೆ.

ಆ) ಹೌದು; ಪೀಠೋಪಕರಣಗಳಿಗಾಗಿ 1997-98ನೇ ಸಾಲಿನಲ್ಲಿ ತಲಾ ರೂ. 25,000ಗಳನ್ನು ಈ ಪದವಿಪೂರ್ವ ಕಾಲೇಜುಗಳಿಗೆ ಅನುದಾನವಾಗಿ ಮಂಜೂರು ಮಾಡಲಾಗಿದೆ.

ಸರ್ಕಾರಿ ಪದವಿಪೂರ್ವ ಕಾಲೇಜು, ಬಲ್ಮಠ ಮತ್ತು ರಥಬೀದಿ, ಮಂಗಳೂರು ಇಲ್ಲಿನ ಕಟ್ಟಡ ದುರಸ್ತಿ, ಹೊಸ ಕೊಠಡಿಗಳ ನಿರ್ಮಾಣ, ಶೌಚಾಲಯ ಮುಂತಾದವುಗಳ ನಿರ್ಮಾಣದ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ನೀಲಿ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿ ಪೂರ್ಣ ಪ್ರಸ್ತಾವನೆ ಸಲ್ಲಿಸಲು ಸಂಬಂಧಿಸಿದ

ಪ್ರಾಚಾರ್ಯರುಗಳಿಗೆ ತಿಳಿಸಲಾಗಿದೆ. ಅವರುಗಳಿಂದ ಪ್ರಸ್ತಾವನೆ ಬಂದ ತಕ್ಷಣ ಕ್ರಮ ಕೈಗೊಳ್ಳಲಾಗುವುದು. ಬೊಕ್ಕಪಟ್ಟಣದ ಪದವಿಪೂರ್ವ ಕಾಲೇಜಿನ ಕಟ್ಟಡದ ಬಗ್ಗೆ ಪ್ರಾಚಾರ್ಯರಿಂದ ಪ್ರಸ್ತಾವನೆ ಬಂದಿರುವುದಿಲ್ಲ. ಅವರಿಂದ ಪ್ರಸ್ತಾವನೆ ಬಂದ ತಕ್ಷಣ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. ಸದರಿ ಕಾಲೇಜುಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಅಲ್ಪಸಂಖ್ಯಾತರ ಖಾಸಗಿ ಕಾಲೇಜುಗಳು

92 (189)

ಶ್ರೀ ಜೆ.ಎ.ಫರ್ನಾಂಡಿಸ್ (ನಾಮನಿರ್ದೇಶನ): ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರ ಆಡಳಿತ ವರ್ಗಗಳಿಂದ ನಡೆಯುತ್ತಿರುವ ಖಾಸಗಿ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಆ ಪೈಕಿ ಅನುದಾನ ಮತ್ತು ಅನುದಾನ ರಹಿತವಾದ ಸಂಖ್ಯೆಗಳೆಷ್ಟು?

ಇ) ಅನುದಾನ ರಹಿತದ ಪೈಕಿ ಮೆಂಗಳೂರು ನಗರದಲ್ಲಿರುವ ಸಂಖ್ಯೆ ಎಷ್ಟು?

ಈ) ಈ ಅನುದಾನ ರಹಿತ ಸಂಸ್ಥೆಗಳಿಂದ ಅನುದಾನಕ್ಕೆ ಬೇಡಿಕೆ ಏನಾದರೂ ಇದೆಯೇ? ಅಲ್ಪಸಂಖ್ಯಾತರು ನಡೆಸುತ್ತಿರುವ ಖಾಸಗಿ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಸರ್ಕಾರವು ಅಪೇಕ್ಷಿಸಿದೆಯೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು):

ಅ) 89

ಆ) 46 ಅನುದಾನಿತ

43 ಅನುದಾನ ರಹಿತ.

ಇ) 09

ಈ) ಹೌದು. ಈ ಬಗ್ಗೆ ಪರಿಶೀಲಿಸಲಾಗುವುದು.